# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 34-ಗಂಗೇನಹಳ್ಳಿ, ಬೆಂಗಳೂರು.

ಸಂಖ್ಯೆ: ಸ.ಅ/ವಾ-34/ಪಿ.ಆರ್/10/2020-21 ದಿನಾಂಕ: 24-02-2021.

## ವಾರ್ಡ್ ಸಮಿತಿ ಸಭೆಯ ನಡವಳಿಗಳು

**ವಿಷಯ:** ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/20-21 ದಿನಾಂಕ: 21-09-2020. ರವರ ಆದೇಶದಂತೆ ದಿನಾಂಕ: 20-02-2021 ರಂದು ಬೆಳಗ್ಗೆ, 11.30 ಗಂಟೆಗೆ ವಾರ್ಡ್ ನಂ: 34. ಗಂಗಾನಗರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

"ಸಭೆಗೆ ಹಾಜರಾಗಿದ್ದವರ ವಿವರಗಳು"

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1. | ಶ್ರೀ ತಿಮ್ಮರಸು | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2. | ರಾಮ್‌ರಾವ್ | ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ.34 |
| 3. | ಭೂಮೇಶ್ | ಹಿರಿಯ ಆರೋಗ್ಯ ಪರಿವೀಕ್ಷಕರು ವಾಡ್ ನಂ: 34, ಸದಸ್ಯರು |
| 4. | ಮಧು | ಕಿರಿಯ ಆರೋಗ್ಯ ಪರಿವೀಕ್ಷಕರು ವಾಡ್ ನಂ: 34, ಸದಸ್ಯರು |
| 5. | ಸುವರ್ಣ ದೇವಿ | ಕಿರಿಯ ಅಭಿಯಂತರರು(ಬಿಡಬ್ಲ್ಯೂಎಸ್‌ಎಸ್‌ಬಿ) |
| 6. | ಬಸವರಾಜ್ | ಎ.ಎಸ್.ಐ ಆರ್‌ಟಿ ನಗರ ಪೋಲಿಸ್ ಠಾಣೆ |
| 7. | ಮಧು ಕಿರಣ್ | ಪಿ.ಎಸ್ ಬಿಬಿಎಂಪಿ |
| 8. | ಎನ್.ಎಸ್ ಲಕ್ಷ್ಮೀನಾರಾಯಣ | ಸಾರ್ವಜನಿಕರು |
| 9. | ಬಿ. ವೇದ ಕುಮಾರ್ | ಸಾರ್ವಜನಿಕರು |
| 10. | ವೀನಾ ಜೆ. ಪಾಟೀಲ್ | ಸಾರ್ವಜನಿಕರು |
| 11. | ಬಸವರಾಜ್ | ಸಾರ್ವಜನಿಕರು |
| 12. | ನಂದ ಕುಮಾರ್ | ಸಾರ್ವಜನಿಕರು |
| 13. | ಅನ್ಸ್‌ರ್ ಖಾನ್ | ಸಾರ್ವಜನಿಕರು |
| 14. | ಮಂಜುನಾಥ್ | ಸಾರ್ವಜನಿಕರು |
| 15. | ಡಾ|| ಶಲೀನಿ | ಅಧ್ಯಕ್ಷರು |
| 16. | ರಘು | ಸಾರ್ವಜನಿಕರು |
| 17. | ರೇವತಿ ರಾಜು | ಸಾರ್ವಜನಿಕರು |

ವಾರ್ಡ್ ಸಮಿತಿಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಯಾದ ಶ್ರೀ. ತಿಮ್ಮರಸು ಮತ್ತು ಕಾರ್ಯದರ್ಶಿಗಳಾದ ಶ್ರೀ ರಾಮ್‌ರಾವ್ ರವರು ಸಭೆಗೆ ಆಗಮಿಸಿದ ಎಲ್ಲರಿಗೂ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು. ಹಾಗೂ ಅಧ್ಯಕ್ಷರಿಗೆ ವಾರ್ಡ್ ಸಭೆ ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ವಿಸ್ತಾರವಾಗಿ ಪ್ರಸ್ತಾಪಿಸಲು ಕೋರಲಾಯಿತು.

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್ ನಂ: 34 ರವರು ಸ್ವಯಂ ಪರಿಚಯ ಮಾಡಿಕೊಂಡು ವಾರ್ಡ್ ವ್ಯಾಪ್ತಿಯಲ್ಲಿ ಘನ ತ್ಯಾಜ್ಯ ನಿರ್ವಹಣೆ, ರಸ್ತೆ ಗುಂಡಿ ಮುಚ್ಚುವ ಬಗ್ಗೆ, ಬೀದಿ ದೀಪಗಳ ನಿರ್ವಹಣೆ ಬಗ್ಗೆ ಮತ್ತು ಕೋವಿಡ್-19 ಸಾಂಕ್ರಾಮಿಕ ರೋಗಕ್ಕೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಲು ಸಾರ್ವಜನಿಕರಿಗೆ ತಿಳಿಯಪಡಿಸಿದರು.

- ವಾರ್ಡ್ ಸಂಖ್ಯೆ : 34-ಗಂಗೇನಹಳ್ಳಿ ವ್ಯಾಪತಿಗೆ ಒಳಪಡುವ ಪ್ರದೇಶಗಳಲ್ಲಿ ಬ್ಲಾಕ್ ಸ್ಪಾಟ್‌ಗಳು ತೆರವುಗೊಳಸದಿರುವ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು ಅದಕ್ಕೆ ಸಂಬಂಧಪ್ಪಂತೆ ಚರ್ಚಿಸಲು ಮಧ್ಯಾನ 2.30 ಗಂಟೆಗೆ ವಾರ್ಡ್ ಕಮಿಟಿ ಸಭೆ ನಡೆಸಲು ಕೋರಲಾಯಿತು.

- ವಾರ್ಡ್ ಸಂಖ್ಯೆ 34 ರ ಬಳ್ಳಾರಿ ಮುಖ್ಯ ರಸ್ತೆಯಲ್ಲಿ ಪಾದಚಾರಿ ಮಾರ್ಗದಲ್ಲಿರುವ ಕುರ್ಚಿಗಳಲ್ಲು ಬೇರೆ ಸ್ಥಕ್ಕೆ ವರ್ಗಾಯಿಸಲು ಅಗತ್ಯ ಕ್ರಮ ವಹಿಸುವಂತೆ ವಾರ್ಡ್ ಸಹಾಯಕ ಅಭಿಯಂತರರು ರವರ ಸೂಚಿಸಲಾಯಿತು.
- ವಾರ್ಡ್ ಸಂಖ್ಯೆ 34 ರ ವ್ಯಾಪ್ತಿಯ ಬೀದಿ ದೀಪಗಳ ಬಗ್ಗೆ ತಿಳಿಸಲಾಗಿರುತ್ತದೆ. ಸದರಿ ದೂರಿನ ಬಗ್ಗೆ ವಿದ್ಯುತ್ ವಿಭಾಗದ ಸಹಾಯಕ ಅಭಿಯಂತರರು ರವರಿಗೆ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.
- ವಾರ್ಡ್ ವ್ಯಾಪ್ತಿಯಲ್ಲಿ ಪಾದಚಾರಿ ಮಾರ್ಗದ ಸ್ವಚ್ಛತೆ ಬಗ್ಗೆ ಚರ್ಚಿಸಿ ಸ್ವಚ್ಛವಾಗಿಡಲು ಅಗತ್ಯ ಕ್ರಮ ವಹಿಸುವಂತೆ ಸೂಚಿಸಲಾಯಿತು. ಈಗಾಗಲೇ ಕೆಲವು ಸ್ಥಳಗಳಲ್ಲಿ ತೀವ್ರವಾದ ಶುಚಿಗೊಳಿಸುವಿಕೆ ಮಾಡಿಸಲಾಗಿರುತ್ತದೆ.
- ವಾರ್ಡ್ ವ್ಯಾಪ್ತಿಯಲ್ಲಿ ದುರಸ್ಥಿಯಲ್ಲಿರುವ ಪ್ರದೇಶಗಳಲ್ಲಿ ತಾರ್ ಆಕಲು ಕ್ರಮ ವಹಿಸುವಂತೆ ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು ರವರಿಗೆ ಸೂಚಿಸಲಾಯಿತು..
- ವಾರ್ಡ್ ವ್ಯಾಪ್ತಿಯ ಅಲ್‌ಪೈನ್ ಅಪಾರ್ಟ್‌ಮೆಂಟ್ ಅಂತಿರ ಕಾವೇರಿ ಪೈಪ್ ಲೈನ್ ದುರಸ್ಥಿಯಲ್ಲಿರುವುದನ್ನು ಈ ಕೂಟಲೇ ಸರಿ ಪಡಿಸಿ ಕುಡಿಯುವ ನೀರಿನ ವ್ಯವಸ್ಥೆ ಮಾಡುವಂತೆ ಬಿಡಬ್ಲ್ಯೂಎಸ್‌ಎಸ್‌ಬಿ ಅಧಿಕಾರಿಗಳಿಗೆ ಸೂಚಿಸಲಾಯಿತು.
- ಬೆಸ್ಕಾಂ ರವರು ವಿದ್ಯುತ್ ಕಂಬ್ಬಿಗೆ ತಗಲುವ ಮರದ ಕೊಂಬೆಗಳನ್ನು ಕಡಿತಗೊಳಿಸಿ ತಾವೆ ಸ್ವಚ್ಛಗೊಳಿಸುವಂತೆ ಸೂಚಿಸಲಾಯಿತು.
- ಬಿಡಬ್ಲ್ಯೂಎಸ್‌ಎಸ್‌ಬಿ ರವರಿಗೆ ಕೊಳವೆಗಳ ತಡೆ ಮತ್ತು ಒಳಚರಂಡಿ ಮಣ್ಣನ್ನು ತೆರವುಗೊಳಿಸುವಂತೆ ಸೂಚಿಸಲಾಗಿದೆ.
- ಖಾಲಿ ಸ್ಥಳಗಲ್ಲಿ ತ್ಯಾಜ್ಯವನ್ನು ಹಾಕುವುದರಿಂದ ಸುತ್ತಮುತ್ತಲಿನ ಸಾರ್ವಜನಿಕರುಗಳಿಗೆ ತುಂಬ ತೊಂದರೆಯಾಗುತ್ತಿರುವುದರಿಂದ ಅಂತಹ ಸ್ಥಳಗಳನ್ನು ಗುರುತಿಸಿ ಸ್ವಚ್ಛಗೊಳಿಸುವಂತೆ ಸೂಚಿಸಲಾಗಿದೆ.
- ವಾರ್ಡ್ ವ್ಯಾಪ್ತಿಯಲ್ಲಿನ ಬಿಬಿಎಂಪಿ ಪಾರ್ಕ್ ನಿರ್ವಹಣೆ ಮಾಡದಿರುವ ಬಗ್ಗೆ ಚರ್ಚಿಸಲಾಗಿ ನಿರ್ವಹಣೆಯ ಬಗ್ಗೆ ಅಗತ್ಯ ಕ್ರಮ ವಹಿಸಲು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿಲಾಯಿತು.
- ವಾರ್ಡ್ ಪ್ರದೇಶಗಳಲ್ಲಿ ಕಸ ಸಾಗಣಿಕೆ ಮಾಡುತ್ತಿರುವ ಆಟೋ ಟಿಪ್ಪರ್ ವಾಹನಗಳು ಮೈಕ್ ಅಳವಡಿಸದೇ ತ್ಯಾಜ್ಯ ಸಂಗ್ರಹಣೆ ಮತ್ತು ಸಾಗಣಿಕೆ ಮಾಡುತ್ತಿರುವುದು ಕಂಡುಬಂದಿರುತ್ತದೆ ಅದಕ್ಕೆ ಸಂಬಂಧ ಪಟ್ಟ ಘನತ್ಯಾಜ್ಯ ನಿರ್ವಹಣೆ ಕೋಶ ರವರಿಗೆ ಮೈಕ್ ಅಳವಡಿಸಲು ಸೂಚಿಸಲಾಯಿತು.
- ಬಿಬಿಎಂಪಿ ಶಾಲೆಯ ಶಿಕ್ಷಕರು ಶಾಲೆಯ ಸಮಯದಲ್ಲಿ ಬೇರೆ ಕಡೆ ಹೋಗುತ್ತಿರುವುದಾಗಿ ಸುತ್ತಮುತ್ತಲಿನ ಸಾರ್ವಜನಿಕರು ಮತ್ತು ಶಾಲ ಮಕ್ಕಳ ಪೋಷಕರು ದೂರು ಸಲ್ಲಿಸಿರುತ್ತಾರೆ ಅದ್ದರಿಂದ ಬಿಇ ಅಧಿಕಾರಿಗಳಿಗೆ ಪತ್ರ ಬರೆಯಲು ಕೋರಿರುತ್ತಾರೆ.
- K.HM Block ೨ನೇ ಅಡ್ಡ ರಸ್ತೆಯಲ್ಲಿ ಪಾದ ಚಾರಿ ಮಾರ್ಗದಲ್ಲಿ ಬೀದಿ ವ್ಯಾಪರಿಗಳನ್ನು ತೆರವುಗೊಳಿಸಲು ಕ್ರಮ ವಹಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಲಾಯಿತು.
- ವಾರ್ಡ್ ಪ್ಯಾಪ್ತಿಯಲ್ಲಿ ಅನಾಧಿಕೃತವಾಗಿ ವಾಹನಗಳನ್ನು ನಿಲ್ಲಿಸಿರುವ ಪ್ರದೇಶಗಳಲ್ಲಿ ನೋ ಪಾರ್ಕಿಂಗ್ ನಾಮ ಫಲಕವನ್ನು ಅಳವಡಿಸುವಂತೆ ಸಂಚಾರ ಪೋಲಿಸ್ ವಿಭಾಗಕ್ಕೆ ಸೂಚಿಸಲಾಯಿತು.
- ವಾರ್ಡ್ 34 ರಲ್ಲಿ ವಾರ್ಡ್ ಕಛೇರಿ ಇಲ್ಲದಿರುವುದರಿಂದ ಸಭೆ ನಡೆಸಲು ಹಾಗೂ ಸಾರ್ವಜನಿಕರುಗಳ ಸಮಸ್ಯೆಗೆ ಸ್ಪಂದಿಸಲು ತೊಂದರೆಯಾಗುತ್ತಿರುವ ನಿಟ್ಟಿನಲ್ಲಿ ಸದರಿ ವಾರ್ಡಿನಲ್ಲಿ ವಾರ್ಡ್ ಕಛೇರಿ ನಿರ್ಮಿಸಲು ಅಗತ್ಯ ಕ್ರಮ ವಹಿಸುವಂತೆ ಈ ಮೂಲಕ ವಿಭಾಗ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಲಾಯಿತು.
- ವಾರ್ಡ್ ವ್ಯಾಪ್ತಿಯಲ್ಲಿ ಗೃಹ ಮುಖ್ಯ ಮಂತ್ರಿಗಳ ಮನೆಯ ಹತ್ತಿರ ಕಳ್ಳತನವಾಗಿರುವುದರಿಂದ ಸದರಿ ಪ್ರದೇಶದ ಸುತ್ತಮುತ್ತಲಿನಲ್ಲಿ ಸಿಸಿ ಕ್ಯಾಮೆರಗಳಲ್ಲಿ ಅಳವಡಿಸುವಂತೆ ಕೋರಿರುವ ಮೇರೆಗೆ ಅಗತ್ಯ ಕ್ರಮ ವಹಿಸಲು ವಾರ್ಡ್ ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.

ಈ ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಕೂಲಂಕುಶವಾಗಿ ಚರ್ಚಿಸಿ, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ: 34, ಗಂಗೇನಹಳ್ಳಿ

ಅಧ್ಯಕ್ಷರು 21/2
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ನಂ: 34, ಗಂಗೇನಹಳ್ಳಿ

<u>ಪ್ರತಿಯನ್ನು:-</u>

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಜಂಟಿ/ಅಪರ ಆಯುಕ್ತರು(ಪೂರ್ವ)ಬಿಬಿಎಂಪಿರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3. ಮಾನ್ಯ ಜಂಟಿ ಆಯುಕ್ತರು (ಆರೋಗ್ಯ/ಎಸ್‌ಡಬ್ಲ್ಯೂಎಂ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ಮಾನ್ಯ ಜಂಟಿ ಆಯುಕ್ತರು (ಪೂರ್ವ) ಬಿ.ಬಿ.ಎಂ.ಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
5. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
6. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿಡಬ್ಲ್ಯೂಎಸ್‌ಎಸ್‌ಬಿ, ರವರ ಅವಗಾಹನೆಗಾಗಿ ಕಳುಹಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪುಲಕೇಶಿನಗರ) ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
9. ಸಹಾಯಕ ಅಭಿಯಂತರರು(ವಿದ್ಯುತ್/ಪುಲಕೇಶಿನಗರ) ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
10. ಕಛೇರಿ ಕಡತಕ್ಕೆ.